ಓಎಸ್ 111/2022

ಪಿಡಬ್ಲ್ಯೂ-1

ದಿ: **15.03.2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

**<u>ಪಾಟೀ ಸವಾಲು: ಶ್ರೀ ಬಿ.ಬಿ ವಕೀಲರಿಂದ</u>**

ನನ್ನ ಸ್ವಂತ ಊರು ನಿಟ್ರೆ ಗ್ರಾಮವಾಗಿರುತ್ತದೆ. ದಾವಾ ಐಟಂ ನಂ. 2 ರ ಆಸ್ತಿಯು ಹಾಲಿ ಮಹದೇವಪ್ಪ ರವರ ಹೆಸರಿನಲ್ಲಿದೆ, ಈಗ ಬೇರೆ – ಬೇರೆಯವರು ಮಾಡಿಕೊಂಡಿರುತ್ತಾರೆ. ಪ್ರತಿವಾದಿ 1 ರಿಂದ 5 ರವರ ಹೆಸರಿಗೆ ದಾವಾ 2 ರ ಆಸ್ತಿಗಳು ಖಾತೆ ಬದಲಾವಣೆಯಾಗಿ ಸು. 10–12 ವರ್ಷಗಳಾಗಿದೆ, ಸಾಕ್ಷಿ ಮುಂದುವರೆದು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಿಂದ ಬಂದ ನಂತರ ಆಗಿರುತ್ತದೆ ಎಂದು ನುಡಿಯುತ್ತಾರೆ. ಖಾತೆ ಬದಲಾವಣೆಯಾದ ನಂತರ ಮಾನ್ಯ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಅಪೀಲು ಹಾಕಲು ತೊಂದರೆ ಇರಲಿಲ್ಲ. ಸ.ನಂ. 196/2 ರಲ್ಲಿ 2 ಎಕರೆ 22 ಗುಂಟೆ ಆಸ್ತಿ ಇದ್ದ ಬಗ್ಗೆ ಅಸಲು ಕ್ರಯಪತ್ರವನ್ನು ಕೊಟ್ಟಿದ್ದೇನೆ. ಸ.ನಂ. 197/2 ರಲ್ಲಿ 1 ಎಕರೆ 27 ಗುಂಟೆ ಇರುವ ಬಗ್ಗೆ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ನನಗೆ ಸೇರಿದ ಕ್ರಯಪತ್ರವನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿಲ್ಲ ಆದರೂ ನಾನು ಹಾಜರು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಐಟಂ 2 ರ ಆಸ್ತಿಗಳು ನಮ್ಮ ಜಮೀನಿನ ಪೂರ್ವ ಪಾರ್ಶ್ವದಲ್ಲಿ ಬರುತ್ತದೆ. ದಾವಾ ಐಟಂ 2 ರ ಆಸ್ತಿಗಳಲ್ಲಿ ಪ್ರತಿವಾದಿಗಳು ಹಾಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. 5ನೇ ಪ್ರತಿವಾದಿ ಹಾಲಿ ಬೆಂಗಳೂರಿನಲ್ಲಿ ವಾಸವಿದ್ದಾರೆ ಎಂದರೆ ಸರಿ. 5ನೇ ಪ್ರತಿವಾದಿಯ ಸ್ವತ್ತುಗಳನ್ನು 7ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. 1928 ರಲ್ಲಿ ಗೋಪಮ್ಮ ಕ್ರಯಕ್ಕೆ ಪಡೆದುಕೊಳ್ಳುವಾಗ ಆಸ್ತಿಗಳನ್ನು ಸರ್ವೆ ಮಾಡಿಸಿದ ಬಗ್ಗೆ ಗೊತ್ತಿದೆ. 2 ಎಕರೆ 22 ಗುಂಟೆಗೆ ಮಾತ್ರ ಸ್ಕೆಚ್ ಆಗಿದೆಯಾ ಎಂದರೆ ಸಾಕ್ಷಿಯು 3 ಎಕರೆ 4 ಗುಂಟೆಗೆ ಸ್ಕೆಚ್ ಆಗಿದೆ ಎಂದು ನುಡಿಯುತ್ತಾರೆ. ನಾನು ಯಾವುದೇ ಸ್ಕೆಚ್ಚನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

ಗೋಪಮ್ಮ ನನ್ನ ಅಜ್ಜಿ, ಮುದ್ದಪ್ಪ ನನ್ನ ತಂದೆ. ನನ್ನ ಅಜ್ಜಿ ಗೋಪಮ್ಮ ಮೂರು ಆಸ್ತಿಗಳನ್ನು ಒಟ್ಟಿಗೆ ಕೊಂಡುಕೊಂಡಿರುತ್ತಾರೆ, ದಿನಾಂಕ ಗೊತ್ತಿಲ್ಲ. ಸ.ನಂ. 197/2 ರ ಆಸ್ತಿಯನ್ನು ಗೋಪಮ್ಮ ದಿಃ 21.03.1945 ರಲ್ಲಿ ಕೊಂಡುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅದಕ್ಕೂ ಪೂರ್ವದಲ್ಲಿ ಕೊಂಡುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಂತರ ಗೋಪಮ್ಮ ಮುದ್ದಪ್ಪ ರವರಿಗೆ ಕ್ರಯ

ಮಾಡಿರುತ್ತಾರೆ. ಆ ಕ್ರಯಪತ್ರದ ವೇಳೆ ನಾನು ಹುಟ್ಟಿರಲಿಲ್ಲ. ನನ್ನ ತಂದೆ ನಾನು ಚಿಕ್ಕವನಿದ್ದಾಗ ತೀರಿಕೊಂಡಿರುತ್ತಾರೆ, ಆಗ ನನಗೆ ವಯಸ್ಸು ಎಷ್ಟಾಗಿತ್ತು ಎಂಬುದು ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಇದೇ ಗುಂಡ್ಲುಪೇಟೆ ನ್ಯಾಯಾಲಯದಲ್ಲಿ ಓಎಸ್ 70/1992 ರಲ್ಲಿ ದಾವಾ ಹಾಕಿದ್ದೆ ಎಂದರೆ ಸರಿ. ಆ ದಾವಾ ವಜಾವಾಯಿತು , ನಮ್ಮ ವಕೀಲರು ಕೇಸು ನಡೆಸಲಿಲ್ಲ. ನಂತರ ನಾವು ಆರ್.ಎ. 47/1993 ರಂತೆ ಮಾನ್ಯ ನಂಜನಗೂಡಿನ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಅಪೀಲು ಹಾಕಿದ್ದೆವು ಎಂದರೆ ಸರಿ. ಆ ಅಪೀಲು ವಜಾವಾಯಿತು ಎಂದರೆ ಸಾಕ್ಷಿಯು ನನಗೆ ಅನುಕೂಲವಾಯಿತು ಎಂದು ನುಡಿಯುತ್ತಾರೆ. ಆರ್. ಎ 47/4993 ರ ತೀರ್ಪಿನ ವಿರುದ್ಧ ಮಹದೇವಪ್ಪ ಬಿನ್ ಮಾದಪ್ಪ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಆರ್.ಎಸ್.ಎ ನಂ. 744/2000 ರಂತೆ ಅಪೀಲು ಸಲ್ಲಿಸಿದ್ದರು ಎಂದರೆ ಸರಿ, ಆ ಅಪೀಲು ಮಹದೇವಪ್ಪನ ಪರವಾಗಿ ಆಯಿತು ಎಂದರೆ ಸರಿ.

ನಮ್ಮ ಜಮೀನಿನ ಅಕ್ಕ – ಪಕ್ಕದವರೊಂದಿಗೆ ನಮಗೆ ಯಾವುದೇ ರಕ್ತ ಸಂಬಂಧ ಇಲ್ಲ ಎಂದರೆ ಸರಿ. ಸ.ನಂ. 196/1 ರಲ್ಲಿ 1ನೇ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಸ.ನಂ. 196/3 ರ 29 ಗುಂಟೆಯಲ್ಲಿ 2ನೇ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಸ.ನಂ. 196/4 ರಲ್ಲಿ 3ನೇ ಪ್ರತಿವಾದಿಯು 29 ಗುಂಟೆಯಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಸ.ನಂ. 196/5 ರಲ್ಲಿ 4ನೇ ಪ್ರತಿವಾದಿ 30 ಗುಂಟೆಯಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಸ.ನಂ. 196/6 ರಲ್ಲಿ 5ನೇ ಪ್ರತಿವಾದಿ 29 ಗುಂಟೆಯಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಸ.ನಂ. 197/1 ರಲ್ಲಿ 6ನೇ ಪ್ರತಿವಾದಿ 1 ಎಕರೆ 27 ಗುಂಟೆಯಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಪ್ರತಿವಾದಿಗಳು ಸರ್ವೆ ಮಾಡಿಸಿದ್ದಾರೆ ಎಂದರೆ ಸಾಕ್ಷಿಯು ಸರ್ವೆ ಮಾಡಿಸಿಲ್ಲ ಎಂದು ನುಡಿಯುತ್ತಾರೆ. ಸ.ನಂ. 196 ಒಟ್ಟು 3 ಎಕರೆ 26 ಗುಂಟೆ ಎಂದರೆ ಸಾಕ್ಷಿಯು 3 ಎಕರೆ 4 ಗುಂಟೆ ಮಾತ್ರ ಎಂದು ನುಡಿಯುತ್ತಾರೆ. ಸ.ನಂ. 196 ರಲ್ಲಿ 3 ಎಕರೆ 26 ಗುಂಟೆಯಲ್ಲಿ ಪ್ರತಿವಾದಿಗಳು ಸ್ವಾಧೀನದಲ್ಲಿದ್ದಾರೆ ಎಂದರೆ ಸುಳ್ಳು. ಸ.ನಂ. 196/1, 196/3, 196/4, 196/5, 196/6 ರಲ್ಲಿ ನಾನು ಹೇಳಿದ 22 ಗುಂಟೆ ಜಮೀನು ಮಧ್ಯದಲ್ಲಿ ಇದೆ ಎಂದರೆ ಸಾಕ್ಷಿಯು 196 ರಲ್ಲಿ ಇದೆ ಎಂದು ನುಡಿಯುತ್ತಾರೆ.

ಮುದ್ದಪ್ಪನಿಗೆ ಮೂರು ಜನ ಹೆಂಡತಿಯರು. ಮೊದಲನೆಯವರು ಸಿದ್ದಮ್ಮ, ಮರಮ್ಮ, ನನ್ನ ತಾಯಿ ಗೌರಮ್ಮ. ಸಿದ್ದಮ್ಮ ನಿಗೆ ಒಬ್ಬಳು ಹೆಣ್ಣುಮಗಳು, ಮರಮ್ಮನಿಗೆ ಮಕ್ಕಳು ಇಲ್ಲ. ಗೌರಮ್ಮಳಿಗೆ ಒಬ್ಬನೇ ಮಗ ನಾನು, ಇಬ್ಬರು ಹೆಣ್ಣುಮಕ್ಕಳು, ಶಿವಮ್ಮ ಮತ್ತು ರೇವಮ್ಮ ಆಗಿರುತ್ತೇವೆ. ಶಿವಮ್ಮ ಮತ್ತು

ಓಎಸ್ 111/2022

ಪಿಡಬ್ಲ್ಯೂ-1

ರೇವಮ್ಮ ರವರು ನನ್ನ ವಿರುದ್ಧ ಹಿಸ್ಸೆಗಾಗಿ ದಾವಾ ಹಾಕಿದ್ದಾರೆ ಎಂದರೆ ಸರಿ. ಆ ಪ್ರಕರಣವು ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯ, ಗುಂಡ್ಲುಪೇಟೆಯಲ್ಲಿ ನಡೆಯುತ್ತಿದೆ. ನನ್ನ ಅಕ್ಕ – ತಂಗಿಯರು ಸ.ನಂ. 196/2 ರಲ್ಲಿ 2 ಎಕರೆ 27 ಗುಂಟೆ ಮತ್ತು 197/2 ರಲ್ಲಿ 1 ಎಕರೆ 27 ಗುಂಟೆಯಲ್ಲಿ ಶಿವಮ್ಮ ಮತ್ತು ರೇವಮ್ಮ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

ಹದ್ದುಬಸ್ತಿಗೆ ಅರ್ಜಿ ಕೊಟ್ಟಿದ್ದೇನೆ, ಅದನ್ನು ನಮ್ಮ ವಕೀಲರಿಗೆ ಕೊಟ್ಟಿದ್ದೇನೆ. ಅರ್ಜಿ ಹಾಕಿ 4-5 ವರ್ಷಗಳಾಗಿದೆ. ಅದನ್ನು ತಂದು ಹಾಜರು ಮಾಡುತ್ತೇನೆ. ಹದ್ದುಬಸ್ತಿನ ವೇಳೆಯಲ್ಲಿ ಆಜು – ಬಾಜುದಾರರಿಗೆ ನೋಟೀಸ್ ಕೊಟ್ಟ ದಾಖಲಾತಿಗಳನ್ನು ತೆಗೆದುಕೊಂಡಿಲ್ಲ. 22 ಗುಂಟೆ ಆಸ್ತಿ ಒತ್ತುವರಿಯಾಗಿದೆ ಈ ಕಾರಣದಿಂದ ನನಗೆ 22 ಗುಂಟೆ ಆಸ್ತಿ ಮೇಲೆ ಘೋಷಣಾತ್ಮಕವನ್ನು ಕೋರಿ ಮತ್ತು ಒತ್ತುವರಿಯನ್ನು ಬಿಟ್ಟುಕೊಡುವಂತೆ ಕೋರಿ ಯಾವುದೇ ನ್ಯಾಯಾಲಯದಲ್ಲಿ ದಾವಾ ಹಾಕಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ಶಿವಕುಮಾರ ಜಿ.ಜೆ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ